International Journal of Kannada Research 2016; 2(3): 145-148

International Journal of Kannada Research
www.kannadajournal.com

ISSN: 2454–5813
IJSR 2016; 2(3): 145-148
© 2016 IJKS
www.kannadajournal.com
Received: 25-05-2016
Accepted: 26-06-2016

**ರವಿ ಎರ**
ಸಂಶೋಧನಾ ವಿದ್ಯಾರ್ಥಿ,
ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ.

**Correspondence**
**ರವಿ ಎರ**
ಸಂಶೋಧನಾ ವಿದ್ಯಾರ್ಥಿ,
ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ.

# ಪ್ರಭುತ್ವ ಮತ್ತು ಧಾರ್ಮಿಕ ಸಿದ್ಧಾಂತಗಳ ಮುಖಾಮುಖಿ

**ರವಿ ಎಂ**

ಕನ್ನಡ ಮಹಾಭಾರತ ಕಾವ್ಯಗಳನ್ನು ಚಾರಿತ್ರಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಪ್ರಧಾನವಾಗಿ ಕಂಡುಬರುವುದು ಪ್ರಭುತ್ವಕೇಂದ್ರಿತ ಆಲೋಚನಾಕ್ರಮಗಳಿಂದ ವಿವೇಚಿಸಲ್ಪಟ್ಟ ಕಥನವಾಗಿ. ಈ ರೀತಿ ರೂಪುಗೊಂಡ ಪ್ರಭುತ್ವವನ್ನು ಅನೇಕ ಆಯಾಮಗಳಲ್ಲಿ ಗುರುತಿಸಬಹುದು. ಪ್ರಸ್ತುತ ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವವನ್ನು ಮಾತ್ರ ಕೇಂದ್ರೀಕರಿಸಿ ನನ್ನ ಚರ್ಚೆಯನ್ನು ವಿಸ್ತರಿಸುತ್ತೇನೆ. ಕನ್ನಡ ಮಹಾಭಾರತ ಕಾವ್ಯಗಳ ರಚನೆಯ ಕಾಲ ಮತ್ತು ಪ್ರಚಲಿತದಲ್ಲಿದ್ದ ಧಾರ್ಮಿಕ ಸಿದ್ಧಾಂತಗಳನ್ನು ಮುಖಾಮುಖಿಗೊಳಿಸಿ ಸಮಾಜದ ಚಿತ್ರಣವನ್ನು ಅರಿಯುವ ಉದ್ದೇಶ ಇದರಲ್ಲಿದೆ.

ರಾಜಪ್ರಭುತ್ವವನ್ನು ಅಧಿಕಾರ ಕೇಂದ್ರೀಕರಣ ಮತ್ತು ಯಜಮಾನಿಕೆಯ ಹಿನ್ನೆಲೆಯಲ್ಲಿ ಗ್ರಹಿಸಬಹುದು. ರಾಜ ಒಬ್ಬನೇ ಆದರೂ ಅವನ ಸಮಾಜ ಮಾತ್ರ ವಿಭಿನ್ನ ಧರ್ಮಗಳ ನೆಲೆಯಾಗಿತ್ತು. ಈ ಸೂಕ್ಷ್ಮವನ್ನು ಅರಿತಿದ್ದ ರಾಜಪ್ರಭುತ್ವ ಹೆಚ್ಚು ಜನರು ಅನುಸರಿಸಲಾಗುತ್ತಿದ್ದ ಧರ್ಮಕ್ಕೆ ಆಶ್ರಯವನ್ನು ನೀಡುತ್ತಿತ್ತು. ಆ ಧರ್ಮದ ಮೂಲದಿಂದಲೇ ಪರೋಕ್ಷವಾಗಿ ಆಡಳಿತವನ್ನು ನಡೆಸುತ್ತಿತ್ತು. ಇದನ್ನು ಧಾರ್ಮಿಕ ಪ್ರಭುತ್ವ ಎಂದು ಕರೆದುಕೊಳ್ಳಬಹುದು. ಒಂದಕ್ಕೊಂದು ಪೂರಕವಾಗಿರುವ ಈ ಪ್ರಭುತ್ವಗಳಲ್ಲಿ ಧಾರ್ಮಿಕ ಪ್ರಭುತ್ವ ಮತ್ತು ರಾಜಪ್ರಭುತ್ವಗಳು ಒಂದಾಗಿ ಸಮಾಜದ ಮೇಲೆ ಹೆಚ್ಚು ಹಿಡಿತವನ್ನು ಸಾಧಿಸಿದವು. ಈ ಕಾರಣಕ್ಕಾಗಿಯೇ ಅಂದಿನ ಸಮಾಜದಲ್ಲಿ ಧರ್ಮ ಪ್ರಧಾನವಾಗಿ ಬಳಕೆಗೊಳ್ಳುತ್ತಲಿತ್ತು. ಅದರಿಂದಲೇ ಧರ್ಮದ ಮೂಲಕ ಜನತೆಯನ್ನು ನಿಯಂತ್ರಿಸುವುದು ಮತ್ತು ಧರ್ಮಗಳ ನಡುವೆ ಸಾಮರಸ್ಯ ನೀತಿಯನ್ನು ಸಾಧಿಸುವುದು ರಾಜಪ್ರಭುತ್ವದ ಮೊದಲ ಆದ್ಯತೆಯಾಗಿತ್ತು.

ಕಾಲ ಕ್ರಮೇಣ ಧರ್ಮಗಳಲ್ಲಿಯೇ ಸೈದ್ಧಾಂತಿಕ ಬಿರುಕುಗಳು ಮೂಡಿ, ಧರ್ಮದಲ್ಲಿ ವ್ಯಕ್ತಿಕೇಂದ್ರಿತವಾಗಿ ಅನೇಕ ಧಾರ್ಮಿಕ ಸಿದ್ಧಾಂತಗಳು ಟಿಸಿಲೊಡೆದವು. ಅದರಂತೆ ಶಂಕರರ "ಬ್ರಹ್ಮವೇ ಸತ್ಯ, ಈ ಬ್ರಹ್ಮವನ್ನು ಬಿಟ್ಟು ಜಗತ್ತಿಗೆ ಪ್ರತ್ಯೇಕ ಅಸ್ತಿತ್ವವಿಲ್ಲ"[1] ಎಂದು ಸಾರುವ ಅದ್ವೈತ ಸಿದ್ಧಾಂತದ ಮೊದಲಾಯಿತು. ಅದ್ವೈತವು ಅಲೌಕಿಕತೆಗೆ ಹೆಚ್ಚಿನ ಪ್ರಧಾನ್ಯತೆಯನ್ನು ನೀಡಿ, ಲೌಕಿಕತೆಯನ್ನು ನಶ್ವರವೆಂದಿತು. ಈ ಮೂಲಕ ಅಸ್ತಿತ್ವಕ್ಕೆ ಕಾರಣ ಬ್ರಹ್ಮ. ಅವನ ಹೊರತಾಗಿ ಜಗತ್ತಿನಲ್ಲಿ ಯಾವುದು ಅಸ್ತಿತ್ವದಲ್ಲಿಲ್ಲವೆಂದಿತು. ಬ್ರಹ್ಮನನ್ನು ಕೂಡುವುದೇ ಮುಕ್ತಿ ಎಂಬ ಮಂತ್ರವನ್ನು ಸಾರಿತು. ಆಗಾದರೆ ತಾನೇ ಬ್ರಹ್ಮನಾಗುವುದು ಅಥವಾ ಬ್ರಾಹ್ಮಣ್ಯವನ್ನು ಸಾಧಿಸುವುದು ಯಾರು ಎನ್ನುವ ಪ್ರಶ್ನೆಯನ್ನು ಉಳಿಸಿತು. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸಮಾಜದ ಕೆಳವರ್ಗದ ಜನರು ಇದರಿಂದ ಸಂಪೂರ್ಣವಾಗಿ ಹೊರಗಿನವರಾಗುತ್ತಾರೆ. ಈ "ಕೆಳವರ್ಗದ ಜನರು ಅಸ್ತಿತ್ವವನ್ನು ಕಂಡುಕೊಳ್ಳಬೇಕಾದರೆ ಅದು ಮೇಲ್ವರ್ಗಗಳನ್ನು ಅವಲಂಬಿಸಿಕೊಂಡರೆ ಮಾತ್ರ ಸಾಧ್ಯ ಎನ್ನುವ ಶ್ರೇಣಿಕೃತ ಸಮಾಜ ವ್ಯವಸ್ಥೆಯ ಧೋರಣೆಯೂ ಇದರಲ್ಲಿ ಕಂಡು ಬರುತ್ತದೆ."[2] ಇದು ಮನು ಹಾಕಿದ ಸಾಮಾಜಿಕ ಪರಂಪರೆಯನ್ನು ಮುಂದುವರೆಸುವ ನೇತಾರಿಕೆಯಾಗಿಯೇ ಕಂಡು ಬರುತ್ತದೆ.

ಶ್ರೇಣಿಕೃತ ಸಮಾಜದಲ್ಲಿ ಸಮನ್ವಯ ಸಾಧಿಸಲು ಪ್ರಯತ್ನಿಸಿದ ಶಂಕರರು ಆಗಲೇ ಧಮನಕ್ಕೆ ಒಳಗಾದ ಕೆಳ ವರ್ಗದವರನ್ನು ಅಲಕ್ಷಿಸಿದರು. ಇದರಿಂದ ಕೆಳವರ್ಗದವರ ಅಸ್ತಿತ್ವವನ್ನು ಗುರುತಿಸುವಂತ ಪರಂಪರಾಗತ ಆಚಾರ–ವಿಚಾರಗಳು, ನಡೆ–ನುಡಿಗಳು, ಹಬ್ಬ–ಹರಿದಿನಗಳು, ಪದಗಳು, ಕುಣಿತಗಳು, ಚಿತ್ತಾರ ಕಲೆಗಳನ್ನೂ ಅಲಕ್ಷಿಸುವ ನಿಟ್ಟಿನಲ್ಲಿ ಸಾಗಿತು. ಇದರಿಂದ ಸಂಪ್ರಾದಾಯಿಕ ಬಹುತ್ವವನ್ನು ಹೊಂದಿದ್ದ ಕೆಳವರ್ಗಗಳನ್ನು ಸಂಪೂರ್ಣವಾಗಿ ಬದಲಾಯಿಸಿಬಿಡುವ ಹಿಡನ್ ಅಜೆಂಡಾ ಅದ್ವೈತಕ್ಕಿತ್ತು,

---

[1] ಪ್ರಭುತ್ವ ಮತ್ತು ಜನತೆ,, ಪು–156

[2] ಅದೇ, ಪು–156

ಎನ್ನಿಸುತ್ತದೆ. ಈ ಮೂಲಕ ಪರೋಕ್ಷವಾಗಿ ಅಂದಿನ ಸಾಮಾಜದ ಚೌಕಟ್ಟಿನೊಳಗಿದ್ದ ಶ್ರೇಣಿಕರಣವನ್ನು ಪ್ರಶ್ನಿಸದೆ ಯಥಾಸ್ಥಿತಿಯನ್ನು ಜಾರಿಗೊಳಿಸುವ ಇರಾದೆಯನ್ನು ಮತ್ತಷ್ಟು ಸಮರ್ಥಿಸಿತು.

ರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತವು ಅದ್ವೈತಕ್ಕೆ ವಿರುದ್ಧವಾಗಿ ಬೆಳೆದು ಬಂದಿತು. "ಅವರ ಪ್ರಕಾರ ಮೋಕ್ಷವೆಂದರೆ ಭಗವಂತನೊಡನೆ ಪಡೆದ ಸಖ್ಯವೇ ಹೊರತು ಜೀವಾತ್ಮನು ಪರಮಾತ್ಮನಲ್ಲಿ ಐಕ್ಯನಾಗುವುದಿಲ್ಲ"[3] ಎಂದಿತು. ಅದ್ವೈತದಂತೆಯೇ ಇದು ಕೂಡ ಲೌಕಿಕ ಜೀವನವನ್ನು ಬಂಧನವೆಂದಿತು. ಈ ಬಂಧನದಿಂದ ಬಿಡುಗಡೆ ಹೊಂದಲು ಭಗವಂತನನ್ನು ಸೇರುವುದು. ಅಂದರೆ ಧಾರ್ಮಿಕ ವಿಧಿ ವಿಧಾನಗಳ ಮೂಲಕ ಮುಕ್ತಿ ಹೊಂದುವ ತತ್ವವನ್ನು ಸಾರಿತು. ಈ ಸಿದ್ಧಾಂತವೂ ಕೂಡ ಧಾರ್ಮಿಕತೆಯನ್ನು ಹೊಸದಾಗಿ ವ್ಯಾಖ್ಯಾನಿಸುತ್ತ ಮಾನವನ ಲೌಕಿಕ ಬದುಕನ್ನು ಕಡೆಗಣಿಸಿತು ಎಂಬುದು ಗಮನಾರ್ಹ.

"ಜೀವಾತ್ಮರು ಪರಮಾತ್ಮನಿಗಿಂತ ಭಿನ್ನರು ಎನ್ನುವುದು ಮಧ್ವರ ಸಿದ್ಧಾಂತ."[4] ಮೇಲಿನ ಸಿದ್ಧಾಂತಗಳಿಗಿಂತ ತುಸು ಬದಲಾವಣೆಯನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಜಾರಿಗೆ ತಂದಿತು. ಆದರೂ ಕ್ರಮೇಣ ಕರ್ಮಠ ಹಾದಿಯನ್ನು ತುಳಿದಿದ್ದು ವಿಪರ್ಯಾಸ. ಈ ಧಾರ್ಮಿಕ ತಾತ್ವಿಕತೆಗಳು ಜನರಲ್ಲಿ ಅಲೌಕಿಕ(ಪರ), ಲೌಕಿಕ(ಇಹ)ಗಳ ಕುರಿತು ದ್ವಂದ್ವವನ್ನು ಸೃಷ್ಟಿಸಿದವು. ಜೀವನವನ್ನು ಸರಳಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಜನರು ಹೊಸ ಧರ್ಮಗಳತ್ತ ಹೊರಳಿದರು.

ಅದರ ಪರಿಣಾಮವಾಗಿ ಜೈನ, ಬೌದ್ಧ ಧರ್ಮಗಳು ತಮ್ಮದೇ ಆದ ಸಿದ್ಧಾಂತಗಳನ್ನು ತಳೆದು ಜನಸಾಮಾನ್ಯರಿಗೆ ಹತ್ತಿರವಾದವು. "ಪ್ರತಿಯೊಬ್ಬ ಜೀವಾತ್ಮನೂ ಪರಮಾತ್ಮನಾಗಬಲ್ಲನು, ಜಿನನಾಗಬಲ್ಲನು ಎನ್ನುವುದು ಜೈನ ಸಿದ್ಧಾಂತದ ನಿಲುವು"[5] ಆಗಿತ್ತು. ಈ ನಿಲುವನ್ನು ಜೈನ ಆಗಮಿಕ ಕಾವ್ಯಗಳಲ್ಲಿ ಗುರುತಿಸಬಹುದು. ಜೈನ ಸಿದ್ಧಾಂತ ಧರ್ಮವಾಗಿ ಪರಿವರ್ತನೆಯಾದ ನಂತರ ಜನರ ಬದುಕನ್ನು ಮತ್ತಷ್ಟು ಸಂಕೀರ್ಣಗೊಳಿಸುವ ಕಡೆ ಸಾಗಿತು. ಪುನಃ "ಜನರು ಬದಲಾವಣೆಯನ್ನು ಬಯಸುತ್ತಿರುವುದನ್ನೇ ಬಂಡವಾಳವನ್ನಾಗಿಸಿಕೊಂಡು ಧಾರ್ಮಿಕ ಮುಖಂಡರು ಹೊಸ ಧರ್ಮಗಳನ್ನು ಹುಟ್ಟುಹಾಕುತ್ತಾರೆ"[6] ಎನ್ನುವುದಕ್ಕೆ ವೀರಶೈವ ಸಿದ್ಧಾಂತ ಅಥವಾ ಶಕ್ತಿವಿಶಿಷ್ಠಾಸಿದ್ಧಾಂತ ಉದಾಹರಣೆಯಾಯಿತು. ಕಾಯಕ ತತ್ವದಡಿ ಮುಕ್ತಿ ಹೊಂದಬಹುದೆಂದು ಸಾರಿತು. ಅದಕ್ಕಾಗಿ ಬಹುಸಂಖ್ಯಾತ ಅಲಕ್ಷಿತ ವರ್ಗದ ಜನರನ್ನೇ ಬಳಸಿಕೊಂಡಿತು. ಇದರಿಂದಾಗಿ ಧಾರ್ಮಿಕ ಪ್ರಭುತ್ವವನ್ನು ಮತ್ತಷ್ಟು ಬಲ ಬಂದಿತು.

ಒಂದರ್ಥದಲ್ಲಿ ಮಾನವನನ್ನು ದಾಸ್ಯದಿಂದ ಬಿಡುಗಡೆಗೊಳಿಸುವ ಪ್ರಯತ್ನ ಮಾಡಿತ್ತಾದರೂ ಸಫಲತೆ ಸಾಧಿಸಲಿಲ್ಲ. ಇಂಥದ್ದನ್ನು ಪರಂಪರಾಗತವಾಗಿ ಕಂಡುಕೊಂಡಿದ್ದ ರಾಜಪ್ರಭುತ್ವ ಹೊಸ ಧಾರ್ಮಿಕ ಸಿದ್ಧಾಂತಗಳಿಗೆ ಆಶ್ರಯ ನೀಡುತ್ತಾ ತನ್ನ ಅಸ್ತಿತ್ವವನ್ನು, ರಾಜತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿತ್ತು. ಈ ಇಬ್ಬಗೆಯ ನಿಲುವಿನಿಂದ ರಾಜಪ್ರಭುತ್ವಕ್ಕೆ ಹೆಚ್ಚು ಅನುಕೂಲವಾಯಿತು. ಮುಂದುವರೆದಿದ್ದ ಕೆಲ ವರ್ಗದವರು ಇದರ ಉಪಯೋಗವನ್ನು ಪಡೆದುಕೊಂಡರು. ಆದರೆ ಜನಸಾಮಾನ್ಯರಿಗೆ ಯಾವ ವಿಧದಲ್ಲಿಯೂ ಉಪಯೋಗವಾಗಲಿಲ್ಲ.

ಈ ಸತ್ಯವನ್ನು ಅರ್ಥಮಾಡಿಕೊಳ್ಳದ ಸಿದ್ಧಾಂತ ಪ್ರತಿಪಾದಕರು ಪ್ರಚಲಿತದಲ್ಲಿದ್ದ ಧರ್ಮವನ್ನು ನಿರಾಕರಿಸಲಿಲ್ಲ. ಬದಲಿಗೆ ಧಾರ್ಮಿಕ ನಂಬಿಕೆ, ಆಚರಣೆಗಳನ್ನು ಸರಳಗೊಳಿಸುವ ನಿಟ್ಟಿನಲ್ಲಿ ತಮ್ಮ ತತ್ವವನ್ನು ಚಲಾವಣೆಗೊಳಿಸಿದರು. ಮತ್ತೊಂದು ರೀತಿಯಲ್ಲಿ ಧಾರ್ಮಿಕ ಶೋಷಣೆಯನ್ನು, ವರ್ಗ ವೈಷಮ್ಯವನ್ನು ಸಮಾಜದಲ್ಲಿ ಸೃಷ್ಟಿಸಿದವು. "ಸಿದ್ಧಾಂತಗಳು ಧರ್ಮಗಳಾಗಿ ರೂಪುಗೊಂಡ ಬಳಿಕ ಅವುಗಳ ಆರಂಭಿಕ ಆಶಯಗಳು, ಬೋಧನೆಗಳು ಮೂಲೆಗುಂಪಾಗಿ ಸಾಂಪ್ರದಾಯಿಕತೆಯೇ ಮೊದಲ ಸ್ಥಾನವನ್ನು ಪಡೆದುಕೊಳ್ಳುತ್ತದೆ. ರಾಜಪ್ರಭುತ್ವಕ್ಕೂ ಈ ರೀತಿಯ ಬೆಳವಣಿಗೆಗಳೇ ಬೇಕಾಗಿರುತ್ತಿತ್ತು. ಧರ್ಮದ ಮೂಲಕ ಜನರನ್ನು ಅಧೀನದಲ್ಲಿಟ್ಟುಕೊಳ್ಳುವುದು ಅರಸರಿಗೆ ಸುಲಭದ ತಂತ್ರವಾಗಿತ್ತು. ಧರ್ಮಗಳು ರಾಜಾಶ್ರಯವನ್ನು ಪಡೆಯಲು ಹಾತೊರೆಯುತ್ತಿದ್ದವು."[7] ಇದನ್ನು ರಾಜಪ್ರಭುತ್ವ ಸಮರ್ಪಕವಾಗಿ ಸಮಾಜದ ಎಲ್ಲಾ ಆಯಾಮಗಳಲ್ಲಿ ಬಳಸಿಕೊಳ್ಳಲು ಪ್ರಾರಂಭಿಸಿತು. ರಾಜಕೀಯವನ್ನು ಪ್ರಭುತ್ವಗಳು ಹೇಗೆ ಬಳಸಿಕೊಂಡವೋ ಅದೇ ರೀತಿ ಧರ್ಮಗಳು ರಾಜಾಶ್ರಯದ ಮೂಲಕ ತಮ್ಮ ಅಸ್ತಿತ್ವನ್ನು ಉಳಿಸಿಕೊಳ್ಳಲು ಪ್ರಯತ್ನಪಟ್ಟವು. ರಾಜಾಜ್ಞೆಗಳ ಉದ್ದೇಶಗಳಿಗೆ ಧರ್ಮವನ್ನು ಹಾಗೂ ಧರ್ಮದ ಉನ್ನತೀಕರಣಕ್ಕೆ ಪ್ರಭುತ್ವದ ಪ್ರಭಾವವನ್ನು ಬಳಸುವುದು ರಾಜಪ್ರಭುತ್ವದ ಸಂದರ್ಭದಲ್ಲಿ ನಡೆಯುತ್ತಿತ್ತು. ಅದು ಕೇವಲ ಆ ಕಾಲಕ್ಕೆ ಸಂಬಂಧಿಸಿದ್ದಲ್ಲ. ಈ ಹೊತ್ತಿಗೂ ಪ್ರಸ್ತುತವೇ ಆಗಿದೆ.

ರಾಜಪ್ರಭುತ್ವದ ಹಿಡಿತ ಹೆಚ್ಚಾಗಿದ್ದರೂ ಧಾರ್ಮಿಕ ದೃಷ್ಟಿಯಿಂದ ಪಂಪ–ಕುಮಾರವ್ಯಾಸರ ನಡುವಿನ ಕಾಲವು ತೂಗೂಯ್ಯಲೆಯಾಗಿತ್ತು. ಇಂಥ ಸಮಾಜಿಕ ವಾತಾವರಣದಲ್ಲಿ ರಚನೆಗೊಂಡ ಸಾಹಿತ್ಯ ಕೃತಿಗಳು ಕಾಲದ ಪ್ರಧಾನ ಗುಣಧರ್ಮಗಳನ್ನು ಒಳಗೊಂಡು, ವ್ಯವಸ್ಥೆಯೊಂದಿಗೆ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತವೆ. ಆದರೆ ಪಂಪ "ಮತದಿಂದ ಅವನು ಜೈನನಾದರೂ ಮನೆತನದ ಪರಂಪರೆಯಿಂದ ವೈದಿಕನಾಗಿದ್ದನು."[8] ತನ್ನ ಲೌಕಿಕ ಕಾವ್ಯ 'ವಿಕ್ರಮಾರ್ಜುನ ವಿಜಯ'ದಲ್ಲಿ "ನರೇಂದ್ರೋದ್ದಾಮ ದರ್ಪೋದ್ದಳನನನೆ ನಾಯಕಂ ಮಾಡಿ ಸಂದ ಅರ್ಜುನನೊಳ್ ಪೋಲ್ವ"[9] ಎಂದು ಹೇಳುವ ಮೂಲಕ "ವೈದಿಕ ಮತದವನಾದ ಅರಿಕೇಸರಿಯನ್ನು ತನ್ನ ಕಾವ್ಯನಾಯಕನ್ನಾಗಿ ಮಾಡಿಕೊಂಡಿದ್ದನು."[10]

ಈ ಕಾಲ ಸಂದರ್ಭದಲ್ಲಿ ಸಾಮಂತರ ರಾಜರನ್ನು ಕುರಿತು ರಚನೆಯಾದ ಲೌಕಿಕ ಕಾವ್ಯಗಳು ತತ್ಕಾಲೀನ ಚರಿತ್ರೆಯಾಗಿಯೂ ಉಳಿದುಕೊಂಡಿವೆ. "ಆದಿ ಪಂಪನ ಪೋಷಕನಾದ 2ನೆಯ ಅರಿಕೇಸರಿ ರಾಷ್ಟ್ರಕೂಟ 3ನೆಯ ಕೃಷ್ಣನ ಸಾಮಂತನಾಗಿದ್ದರೂ ಸಾಮ್ರಾಟನ ಜರುಬಿನಿಂದ ನಡೆಯುತ್ತಿದ್ದಿರಬೇಕು."[11] ಇದರಿಂದ ಸಾಮಂತರ ರಾಜರ ಸಹಕಾರದಿಂದಲೇ ಒಂದು ಬೃಹತ್ ಸಾಮ್ರಾಜ್ಯ ಅಸ್ತಿತ್ವದಲ್ಲಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಹೀಗಾಗಿ ಸಾಮಂತ ಅಥವಾ ಸ್ಥಳೀಯ ರಾಜಮನೆತನಗಳ ಪ್ರಭಾವ ಜನರ ದೈನಂದಿನ ಬದುಕಿನ ಮೇಲೆ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತಿದ್ದಿರಬೇಕು. ಪಂಪನಂತೆ ರನ್ನನು ಕೂಡ "ಚಾಲುಕ್ಯ ಚಕ್ರವರ್ತಿ ಇಮ್ಮಡಿ ತೈಲಪನ ಹಾಗೂ ಆತನ ಮಗ ಇರಿವಬೆಡಂಗ ಸತ್ಯಾಶ್ರಯನ ಆಸ್ಥಾನ ಕವಿ"[12]ಯಾಗಿದ್ದುಕೊಂಡು ಸತ್ಯಾಶ್ರಯ ಮತ್ತು ಭೀಮನಲ್ಲಿ ಅಭೇದ ಕಲ್ಪಿಸಿ 'ಸಾಹಸಭೀಮ ವಿಜಯ'ವೆಂಬ ಲೌಕಿಕ ಕಾವ್ಯವನ್ನು

[3] ಪ್ರಭುತ್ವ ಮತ್ತು ಜನತೆ, ಪು–157

[4] ಅದೇ, ಪು–163

[5] ಅದೇ, ಪು–173

[6] ಅದೇ, ಪು–165

[7] ಪ್ರಭುತ್ವ ಮತ್ತು ಜನತೆ, ಪು–171

[8] ಮುಗಳಿ ರಂ.ಶ್ರೀ. ಕನ್ನಡ ಸಾಹಿತ್ಯ ಚರಿತ್ರೆ, ಪುಟ–89

[9] ಬಸವರಾಜು ಎಲ್(ಸಂ), ಸರಳ ಪಂಪ ಭಾರತ, ಆಶ್ವಾಸ 1, ಪೀಠಿಕೆ, ಪದ್ಯ–51, ಪುಟ–34

[10] ಶ್ರೀಕಂಠಯ್ಯ. ತೀ.ನಂ. ಪಂಪ, ಪುಟ–37

[11] ಮುಗಳಿ ರಂ.ಶ್ರೀ. ಕನ್ನಡ ಸಾಹಿತ್ಯ ಚರಿತ್ರೆ, ಪುಟ–84

[12] ಸುಬ್ರಾಯ ಭಟ್ ಪಿ. ಗದಾಯುದ್ಧ ದರ್ಪಣಂ, ಸಂಕ್ಷಿಪ್ತ ಕವಿಕಾವ್ಯ ಪರಿಚಯ

ರಚಿಸಿದನು. ಪಂಪ-ರನ್ನರು "ಜೈನಕವಿಗಳಾಗಿದ್ದು ಆ ಧರ್ಮದ ವಸ್ತುವನ್ನು ಕುರಿತು ಕಾವ್ಯ ಬರೆಯುವುದು ಸಹಜವೇ. ಆದರೆ ವೈದಿಕ ವಸ್ತುವನ್ನು ತೆಗೆದುಕೊಂಡು, ಅದನ್ನು ಜೈನಧರ್ಮಕ್ಕೆ ತಿರುಗಿಸಿಕೊಳ್ಳದೆ ಕಾವ್ಯ ರಚಿಸಿದ್ದು ಈ ಕವಿಗಳ ಉದಾರದೃಷ್ಟಿಯನ್ನೂ ಸಮತೋಲನ ಬುದ್ಧಿಯನ್ನೂ ತೋರಿಸುತ್ತದೆ."[13] ಜೊತೆಗೆ ಅಂದಿನ ವ್ಯವಸ್ಥೆಯಲ್ಲಿ ಪ್ರಧಾನವಾಗಿದ್ದ ಜೈನ-ವೈದಿಕ ಧರ್ಮಗಳ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಕೃತಿ ರಚನೆ ಮಾಡಿರುವುದಾಗಿಯೂ ಗುರುತಿಸಬಹುದು. "ಅಷ್ಟೇ ಅಲ್ಲ, ಆಶ್ರಯದಾತ ವೈದಿಕ ಅರಸರ ಅವಕೃಪೆಗೆ ಗುರಿಯಾಗಬಾರದೆಂದು ರಾಮ-ಕೃಷ್ಣರಂತಹ ದೈವೀಪಾತ್ರಗಳನ್ನು ಮಾನವೀಕರಿಸಲಾಯಿತು. ಇದರ ಪರಿಣಾಮವಾಗಿ ಜೈನಕವಿಗಳು ವೈದಿಕ ಮತಾವಲಂಬಿಗಳ ಕೆಂಗಣ್ಣಿಗೂ ಗುರಿಯಾಗಬೇಕಾಯಿತು."[14] ಆಶ್ರಯದಾತನನ್ನು ಒಲೈಸುವವಾಗ ಇದು ಸಹಜವಾದದ್ದು. ಲೌಕಿಕ ಕಾವ್ಯಗಳಲ್ಲಿ "ಅಭಿವ್ಯಕ್ತಿಯ ವಿಧಾನ, ಅದರ ಶೈಲಿ, ವಸ್ತು ವಿಷಯ ಹಾಗೂ ಅಭಿವ್ಯಕ್ತಿಯ ರಾಜಕಾರಣವು ಧರ್ಮದ ಹಂಗಿಗೆ ಒಳಗಾದವು. ಪ್ರಭುತ್ವವು ತನ್ನ ಅಸ್ತಿತ್ವಕ್ಕೆ ಬೇಕಾದ ಅಭಿವ್ಯಕ್ತಿಗೆ ಮನ್ನಣೆ ನೀಡಿತು."[15] 'ಕಾವ್ಯಧರ್ಮ'ವನ್ನು ತನಗೆ ಬೇಕಾದಂತೆ ಬಳಸಿಕೊಳ್ಳುವ ಸ್ವಂತತ್ರವನ್ನು ಹೊಂದಿತ್ತು. ಇದರಿಂದಾಗಿ ಧರ್ಮಗಳ ನಡುವೆ ಉಂಟಾಗಬಹುದಾದ ವೈಮನಸ್ಸುಗಳನ್ನು ಅರಿತಿದ್ದರೂ ಮೌನವಹಿಸಿದವು.

ರಾಜಪ್ರಭುತ್ವವನ್ನು ಕೇಂದ್ರೀಕರಿಸುವ ನಿಟ್ಟಿನಲ್ಲಿ ಕೃತಿಗಳು ರಚನೆಗೊಂಡವು ಎಂಬುದು ಸ್ಪಷ್ಟ. ಈ ಕೃತಿಗಳಲ್ಲಿ ಸ್ಥಳೀಯ ಮತ್ತು ಮೌಖಿಕ ಸಾಂಸ್ಕೃತಿಕ ಚರಿತ್ರೆಗಳು ಹೊರಗುಳಿದವು ಅನ್ನಿಸಿತು. ಕಾರಣ ಚರಿತ್ರೆಯೆಂದರೆ ರಾಜ ಮನೆತನಗಳ ಆಡಳಿತ ಪರಂಪರೆ ಎಂದು ನಂಬಿಕೊಂಡಿದ್ದು. ಆದರೆ ಹೊಸ ಅಧ್ಯಯನಗಳಿಂದಾಗಿ ಚರಿತ್ರೆಯೆಂದರೆ ಬರೀ ರಾಜ ಮನೆತನಗಳ ಚರಿತ್ರೆ ಅಲ್ಲ. ಅದು ಜನರ ಚರಿತ್ರೆ. ಆ ಚರಿತ್ರೆಯಲ್ಲಿ ರಾಜರು ಒಂದು ಭಾಗ. ಆದ್ದರಿಂದ ರಾಜಪ್ರಭುತ್ವಗಳ ಮುಖೇನ ಚರಿತ್ರೆಯನ್ನು ಕಟ್ಟುವುದು ತಪ್ಪಾಗುತ್ತದೆ ಎಂಬುದನ್ನು ಕಂಡಕೊಂಡರು.

ಲೌಕಿಕ ಕಾವ್ಯಗಳಲ್ಲಿ ಜನತೆಯ ಚರಿತ್ರೆಯೂ ಸೇರಿಕೊಂಡಿರುತ್ತದೆ. ಏಕೆಂದರೆ ಕವಿಯೂ ಕೂಡ ತನ್ನ ಕಾಲದ ಪ್ರತಿನಿಧಿಯಾಗಿರುತ್ತಾನೆ. ಹಾಗಾಗಿ ಕವಿಯ ಮನೋಧರ್ಮಕ್ಕೆ ಅನುಗುಣವಾಗಿ ಜನತೆಯ ಬದುಕಿನ ರೀತಿ-ನೀತಿ, ಧರ್ಮ, ಜೀವನ ಮೌಲ್ಯಗಳು, ಸಾಮಾಜಿಕ ಪರಿಸರವನ್ನು, ಪ್ರಭುತ್ವ ಮತ್ತು ಧರ್ಮಗಳೊಂದಿಗೆ ಜನತೆ ಹೊಂದಿದ್ದ ಸಂಬಂಧಗಳೂ ಕಾವ್ಯಗಳಲ್ಲಿ ಸೇರಿರುತ್ತವೆ. ಜನರ ಚರಿತ್ರೆಯಲ್ಲಿ ರಾಜರ ಚರಿತ್ರೆಯೂ ಪ್ರಧಾನವಾಗಿ ಸೇರಿಕೊಂಡಿದ್ದರೂ ಈ ಮೇಲಿನ ಅಂಶಗಳನ್ನು ಗುರುತಿಸಲಿಕ್ಕೆ ಅವಕಾಶವಿದೆ. ವಾಸ್ತವ ಜೀವನದ ತಳಹದಿಯಲ್ಲಿ ರಚನೆಗೊಂಡ ಲೌಕಿಕ ಕಾವ್ಯಗಳಲ್ಲಿ ಹೆಚ್ಚಾಗಿ ಕಾಣಸಿಗುವ ಈ ಅಂಶಗಳು, ಧರ್ಮಕ್ಕೆ ಹೆಚ್ಚಿನ ಆದ್ಯತೆ ನೀಡಿ ರಚನೆಯಾದ ಅಲೌಕಿಕ ಕಾವ್ಯಗಳಲ್ಲಿ ಕಂಡುಬರುವುದಿಲ್ಲ. ಅವುಗಳಲ್ಲಿ ಧರ್ಮದ ತಾತ್ವಿಕತೆಗಳು, ಸ್ವಧರ್ಮವನ್ನು ಸಮರ್ಥಿಸುವ ಅಂಶಗಳು ಹೆಚ್ಚಾಗಿರುತ್ತವೆ. "ಲೌಕಿಕ ಕೃತಿಗಳು ಆಶ್ರಯದಾತರಾಜನ ಚರಿತ್ರೆ, ತತ್ಕಾಲೀನ ರಾಜಕೀಯ ಹಾಗೂ ಇತರ ಜೀವನ ಇವನ್ನು ಸೂಚಿಸುವ ಚಾರಿತ್ರಿಕ ಧ್ವನಿ-ಕಾವ್ಯಗಳಾದುವು."[16] ಜನತೆಯ ಚರಿತ್ರೆಯನ್ನು ಕಾವ್ಯಗಳಲ್ಲಿ ಹುಡುಕುವುದಕ್ಕೆ ಆಕರಗಳೂ ಆದವು.

ಧಾರ್ಮಿಕ ಸಿದ್ಧಾಂತಗಳಲ್ಲಿನ ಒಡಕುಗಳು ಧರ್ಮವನ್ನು ವಲಸೆ ಹೋಗುವಂತೆಯೂ ಮಾಡಿದವು. ಪರಿಣಾಮವಾಗಿ ಧಾರ್ಮಿಕ ಸಿದ್ಧಾಂತಗಳು ರಾಜಾಶ್ರಯವನ್ನು ಬಯಸಿದವು. ಈಗಾಗಲೇ ಅಸ್ತಿತ್ವದಲ್ಲಿದ್ದ ಧರ್ಮ ಮತ್ತು ಹೊರಗಿನಿಂದ ಬಂದ ಧರ್ಮಗಳ ನಡುವಿನ ಸಂಘರ್ಷ ಮತ್ತಷ್ಟು ಹೆಚ್ಚಳವಾಯಿತು. ಉದಾಹರಣೆಗೆ-ರಾಮಾನುಜರು ಚೋಳರ ನಾಡಿನಿಂದ ಕನ್ನಡನಾಡಿಗೆ ತಂದ ತಮ್ಮ ಧಾರ್ಮಿಕ ಸಿದ್ಧಾಂತದಿಂದಾಗಿ ಜೈನಧರ್ಮದ ಬೆಳವಣಿಗೆ ಕುಂಠಿತವಾಯಿತು. ಇದರಿಂದಾಗಿ ಭಾಗವತ ಪರಂಪರೆ ಕನ್ನಡನಾಡಿನಲ್ಲಿ ಸಮೃದ್ಧವಾಗಿ ಬೆಳೆಯಿತು. ಧಾರ್ಮಿಕ ಮುಖಂಡರಲ್ಲಿ ಮೂಡಿದ "ಮತೀಯ ಅಸೂಯೆ, ಪರಸ್ಪರ ದೂಷಣೆ ಪಂಡಿತರಲ್ಲಿಯೂ ಗ್ರಂಥಕಾರರಲ್ಲಿಯೂ ಮಿಗಿಲಾಗುತ್ತ ನಡೆದವು."[17] ಎಷ್ಟರ ಮಟ್ಟಿಗೆಂದರೆ ಮಧ್ಯಕಾಲೀನ ಕನ್ನಡ ಸಾಹಿತ್ಯದ ಭಾಗವತ ಪರಂಪರೆಯಲ್ಲಿ ಪಂಪ-ರನ್ನರ ಕನ್ನಡ ಮಹಾಭಾರತಗಳನ್ನು ಬಿಟ್ಟು ಪುನಃ ಸಂಸ್ಕೃತ ಭಾರತಗಳನ್ನು ಆಕರವಾಗಿಟ್ಟುಕೊಂಡು ಕಾವ್ಯಗಳು ರಚನೆಯಾದವು.

ಈ ನಿಟ್ಟಿನಲ್ಲಿ ಲೌಕಿಕ ಕಾವ್ಯ ಪರಂಪರೆಯನ್ನು ಮುರಿದವನು ಕುಮಾರವ್ಯಾಸ. "ಮಹಾಭಾರತದ ಬೇರೆ ಬೇರೆ ಚೌಕಟ್ಟುಗಳೂ ಈ ಸಮುದಾಯಗಳಲ್ಲಿ ಪ್ರಚಲಿತವಾಗಿದ್ದವು. ಈಗಾಗಲೇ ಪರಿಚಿತವಾಗಿರುವ ಕಥೆಯೊಂದರ ಪಾತ್ರಕ್ಕೆ ದ್ವಿಜಸ್ಪರ್ಶ ಅಥವಾ ಭಾಗವತ ಸ್ಪರ್ಶ ಮಾಡಿ ಹೊಸ ರೂಪದಲ್ಲಿ 'ದರ್ಶನ' ಮಾಡಿಸಿದರೆ ಸಹಜವಾಗಿಯೇ ಆ ಎಲ್ಲಾ ಸಮುದಾಯಗಳೂ ಉಘೇ ಉಘೇ ಎನ್ನುತ್ತವೆ. ಅದರಲ್ಲೂ ಕಾವ್ಯಾಮೃತದ ಜೊತೆ ಸೇರಿಸಿ ಕುಡಿಸಿದರೆ ಅಮಲೇರುತ್ತದೆ ಎಂಬ ಗುಟ್ಟು, ಕುಮಾರವ್ಯಾಸ ಬದುಕಿದ್ದ ಕಾಲದ ವೈದಿಕ ಪ್ರಜ್ಞೆಗೆ ತಿಳಿದಿತ್ತು."[18] ಇದನ್ನು ಸಮರ್ಪಕವಾಗಿ ಬಳಸಿಕೊಂಡ ಭಾಗವತ ಪರಂಪರೆ ಕೃಷ್ಣ ಪರಮಾತ್ಮನೆಂಬ ದೃಷ್ಟಿಕೋನದಲ್ಲಿ ಕಾವ್ಯವನ್ನು ರಚಿಸಿದನು. ಇದಕ್ಕಾಗಿಯೇ ಜನಪದರ ಭಾಷೆಯನ್ನು ದುಡಿಸಿಕೊಂಡಿರಬೇಕು. ಜನತೆಯ ಭಾಷೆಯನ್ನು ಬಳಸಿಕೊಂಡಷ್ಟು ಧರ್ಮವೂ ಪ್ರಚಾರವಾಗುತ್ತದೆ ಎನ್ನುವ ತಂತ್ರವೂ ಮುಖ್ಯವಾಗಿರಬಹುದು. ಆದ್ದರಿಂದಲೇ ಸಕಲವೂ ಕೃಷ್ಣಮಯವನ್ನಾಗಿಸಿಕೊಂಡು ತನ್ನ ಅಸ್ಥಿತ್ವಕ್ಕೆ ಜಾಗವಿಲ್ಲದಂತೆ "ವೀರನಾರಾಯಣನೆ ಕವಿ ಲಿಪಿಕಾರ ಕುವರವ್ಯಾಸ"[19]ನೆಂದು ಹೇಳಿಕೊಂಡು ಪುನಃ ಸಂಪ್ರದಾಯಿಕತೆಗೆ ಮಣೆ ಹಾಕಿ, ಜನತೆಯನ್ನು ಧಾರ್ಮಿಕತೆಗೆ ಒಳಗು ಮಾಡುವ ಪ್ರಭುತ್ವದ ಪಡಿಯಚ್ಚಾಗಿರುವುದನ್ನು ಗುರುತಿಸಬಹುದಾಗಿದೆ.

ಇಲ್ಲಿಯವರೆಗೂ ಚರಿತ್ರೆಯೆಂದರೆ ರಾಜರ ಚರಿತ್ರೆಯೇ ಜನರ ಚರಿತ್ರೆಯೆಂದು ಹೇಳುವ ಮೂಲಕ 'ಜನತೆ'ಗೆ ಚರಿತ್ರೆಯಲ್ಲಿ ಯಾವ ಸ್ಥಾನವೂ ದೊರಕಿಸಿಕೊಟ್ಟಿಲ್ಲ. ಆದರೆ ಜನತೆಯನ್ನು ತಮ್ಮ ಉದ್ದೇಶಕ್ಕೆ ಆಗಾಗ ಸಮರ್ಪಕವಾಗಿ ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳೆರಡು ಬಳಸಿಕೊಂಡಿವೆ, ಬಳಸಿಕೊಳ್ಳುತ್ತಲೂ ಇವೆ. ಇದು ಕಾಲಾತೀತ.

## ಗ್ರಂಥ ಸೂಚಿ

1. ಬಸವರಾಜು ಎಲ್ (ಸಂ), 1999, ಸರಳ ಪಂಪ ಭಾರತ, ಗೀತಾ ಬುಕ್ ಹೌಸ್ ಮೈಸೂರು.
2. ಪ್ರಸನ್ನ ಎ ವಿ (ಸಂ), 2001, ಕನ್ನಡ ಭಾರತ, ಪ್ರಸಾರಾಂಗ

[13] ಸಣ್ಣಯ್ಯ ಬಿ.ಎಸ್, ರನ್ನ: ಕವಿ-ಕಾವ್ಯ ವಿಶ್ಲೇಷಣೆ, ರನ್ನನ ಸಾಹಸಭೀಮ ವಿಜಯ: ಪರಾಮರ್ಶೆ, ಪುಟ-2

[14] ಪ್ರಸ್ತಾವನೆ, ರನ್ನನ ಸಾಹಸಭೀಮ ವಿಜಯ: ಪರಾಮರ್ಶೆ, ಪುಟ-xiii

[15] ಮೊಗಳ್ಳಿ ಗಣೇಶ, ದೇಸಿವಾದದ ಬೇರುಗಳು, ಅರುಹು ಕುರುಹು, ಪುಟ-1

[16] ಮುಗಳಿ ರಂ.ಶ್ರೀ. ಕನ್ನಡ ಸಾಹಿತ್ಯ ಚರಿತ್ರೆ, ಪುಟ-85

[17] ಮುಗಳಿ ರಂ.ಶ್ರೀ. ಕನ್ನಡ ಸಾಹಿತ್ಯ ಚರಿತ್ರೆ, ಪುಟ-84

[18] ತಿಮ್ಮೇಗೌಡ ನೊ ಸಂ, ಕುಮಾರವ್ಯಾಸ ಮತ್ತು ಶೂದ್ರ ಸಮುದಾಯಗಳು: ಒಂದು ಟಿಪ್ಪಣಿ, ಕುಮಾರವ್ಯಾಸ ಭಾರತ ಸಾಂಸ್ಕೃತಿಕ ಮುಖಾಮುಖಿ, ಪುಟ-103

[19] ಪ್ರಸನ್ನ ಎ.ವಿ. ಕನ್ನಡ ಭಾರತ, ಆದಿ ಪರ್ವ, ಪೀಠಿಕಾ ಸಂಧಿ, ಪದ್ಯ-7, ಪುಟ-1

ಕನ್ನಡ ವಿಶ್ವವಿದ್ಯಾಲಯ, ಹಂಪಿ.

3. ಸುಬ್ರಾಯ ಭಟ್ ಪಿ, 2001 (ದ್ವಿಮು), ಗದಾಯುದ್ಧ ದರ್ಪಣಂ, ಶ್ರೀಮತಿ ಲಲಿತಾ, 'ಪಾರ್ವತೀ ಭುವನ' ಕೋಟೆಕಣಿ ರಸ್ತೆ, ಕಾಸರಗೋಡು.
4. ಶ್ರೀಕಂಠಯ್ಯ. ತೀ. ನಂ, 1974, ಪಂಪ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು.
5. ಮುಗಳಿ. ರಂ.ಶ್ರೀ, 2014, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.
6. ರಹಮತ್ ತರೀಕೆರೆ (ಸಂ), 2004, ಕುಮಾರವ್ಯಾಸ ಭಾರತ– ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಬಾಳಣ್ಣ ಸೀಗೀಹಳ್ಳಿ (ಸಂ), 2004, ರನ್ನನ ಸಾಹಸಭೀಮ ವಿಜಯ: ಪರಾಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
8. ರಾಮಚಂದ್ರಪ್ಪ ಬರಗೂರು (ಪ್ರ.ಸಂ), 1993, ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
9. ಇಂದಿರಾ ಕೃಷ್ಣಪ್ಪ (ಸಂ), 2010, ಪ್ರೊ. ಬಿ. ಕೃಷ್ಣಪ್ಪನವರ ಬರಹಗಳು ಮತ್ತು ಭಾಷಣಗಳು, ಭಾಗ–2, ಪ್ರೊ. ಬಿ.ಕೆ. ಟ್ರಸ್ಟ್, ಬೆಂಗಳೂರು.
10. ಮೋಹನ್ ಕೃಷ್ಣ ರೈ. ಕೆ, 2004, ಕರ್ನಾಟಕ ಸಂಸ್ಕೃತಿ ಚರಿತ್ರೆ– 3, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.